SRI M. S. KRISHNAN.—We will walk out.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾದ ಪಂಪಾಪತಿಯವರು ಕೆ. ಬಿ. ಶಾನಪ್ಪನವರು, ಎಂ. ಎಸ್. ಕೃಷ್ಣನ್‌ರವರು, ಆರ್. ವೆಂಕಟರಾಮಯ್ಯ ಮತ್ತು ಟಿ. ಎಸ್. ಮಣಿ ಇವರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದುದನ್ನು ಅಧಿಕೃತವಾಗಿ ದಾಖಲೆ ಮಾಡಬಾರದೆಂದು ಅಧ್ಯಕ್ಷರು ಆದೇಶಿಸಿದರು.)

ಶ್ರೀ ಎಂ. ಎಸ್. ಕೃಷ್ಣನ್.—ನಾವು ಕುಳಿತುಕೊಳ್ಳುವುದಿಲ್ಲ. ನಾವು ಹೊರಗೆ ಹೋಗುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಈ ರೀತಿ ವರ್ತನೆ ಮಾಡಿದರೆ ನಿಮ್ಮ ನಾಲ್ಕುಮಂದಿಯ ಮೇಲೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. Nothing will be recorded. What ever you have said, will not be recorded. It is expunged. The matter has been closed after my ruling.

(Sriyuths M. S. Krishnan, R. Venkataramaiah, pampapathi, K. B. Shanappa and T. S. Mani walked out of the House)

ಅಧ್ಯಕ್ಷರು.—ಇವರು ವಾಕೌಟ್ ಮಾಡಲು ಬಂದಿದ್ದರು, ನಾಳೆ ಪೇಪರ್‌ನಲ್ಲಿ ಬರಲಿ ಅಂಥ. ಮಾನ್ಯ ಕೆ. ಹೆಚ್. ಪಾಟೀಲರೇ ತಾವು ಮಾತನಾಡಿ.

Finan Cialh Business

ರೈಲರ್-ರ್ನೇ ಸಾಲಿನ ಬೇಡಿಕೆಗಳ ವೇಲಿನ ಚರ್ಚೆ ಬೇಡಿಕೆಗಳ ಕ್ರಮ ಸಂ ೧೭,೧೮,೧೯,೨೦, ೨೨,೩೯, ೪೦,೪೧,೪೨,೪೩,೨೭ ಮತ್ತು ೫೫—ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಇತರೆ ಬೇಡಿಕೆಗಳು.

ಶ್ರೀ ಕೆ. ಹೆಚ್. ಪಾಟೀಲ್(ಗದಗ್).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಿಸಿದ ಅನೇಕ ಬೇಡಿಕೆ ಮೇಲೆ ಎರಡೂಕಡೆಯ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚು ಸಮಯವನ್ನು ತೆಗೆದು ಕೊಳ್ಳದೆ ಕೆಲವೇ ಮಾತುಗಳನ್ನು ಆಡಿ ಕೆಲವು ವಿಷಯಗಳ ಕೊಡುಬೇಕಾಗಿರುವ ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಈ ಪತ್ರಿಕೆಯ ದಿವಸ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷಗಳ ಲಾಗಾಯ್ತು ಏನು ಹೇಳುತ್ತಾ ಬಂದಿರುತ್ತಾರೆ ಅದಕ್ಕೂ ಇದಕ್ಕೂ ಬಹಳ ದೂರ ಇರುತ್ತದೆ. ಅವರು ಹೇಳುತ್ತಿದ್ದಂಥ ದೆವಲಪ್‌ಮೆಂಟ್ ಆಕ್ಟಿವಿಟೀಸ್, ಪ್ಲಾನಿಂಗ್ ಎಂದು ಹೇಳಿ ಗೋಡೌನ್ ಕಟ್ಟಿಸುತ್ತೇವೆ, ಪುನೆಗೆಳನ್ನು ಕಟ್ಟಿಸುತ್ತೇವೆಂದು ತೋರಿಸುತ್ತಿದ್ದರೇ ವಿನಃ ರಚನಾತ್ಮಕವಾದ ಮತ್ತು ದೇಶಕ್ಕೆ ಉತ್ಪಾದನೆಯನ್ನು ಮಾಡತಕ್ಕಂಥ ಯಾವುದೇ ಯೋಜನೆಯನ್ನು ಇಳಿಪಡಿಸಿಕೊಳ್ಳದಿರುವುದು ಅತ್ಯಂತ ವಿಷಾದನೀಯ. ಅವರು ಪ್ರಾಯಶಃ ಕಠಿಣಮಯವಾದ ಬಜೆಟ್‌ನ್ನು ತಂದು ಇದರಲ್ಲಿ ನಾವು ಏನು ಮಾಡಬೇಕು ಎನ್ನುವ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ಮಾಡಲಾರದಂಥ ಅನೇಕ ಕಾರ್ಯಕ್ರಮಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ ಒಂದು ಹೇಳುತ್ತೇನೆ. "ನವದೆಹಲಿಯ ಅಖಿಲ ಭಾರತ ಅನುಸೂಚಿತ ಜಾತಿ ಸಹಕಾರ ಅಭಿವೃದ್ಧಿ ನಿಗಮದಿಂದ ಕಾರ್ಯಗತ ಗೊಳಿಸಲಾಗುವ ಬೆಂಗಳೂರು ಜಿಲ್ಲೆಯಲ್ಲಿರುವ ಹಣ್ಣು, ಹೂವು ಮತ್ತು ತರಕಾರಿ ರಫ್ತು ಯೋಜನೆಗಳನ್ನು ಇನ್ನೂ ಎರಡು ಜಿಲ್ಲೆಗಳಿಗೆ ವಿಸ್ತರಿಸುವುದು" ಎಂದು ಹೇಳಿದ್ದೀರಿ, ಬಹಳ ಸಂತೋಷ, ಸಮ್ಮಿಲ್ಲಿರತಕ್ಕಂಥ ಪೆಡ್ಯೂಲ್‌ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್ ಇನ್‌ಸ್ಟಿಟ್ಯೂಷನ್‌ಗಳಿಗೆ ೪-೫ ವರ್ಷಗಳ ಹಿಂದೆ ಮಾಡಿದಂಥ ಇನ್‌ಸ್ಟಿಟ್ಯೂಷನ್‌ಗಳು. ಅವಕ್ಕೆ ಹಣವನ್ನು ಕೊಡಬೇಕೆಂಬ ಇನ್ನೊಂದು ದೃಷ್ಟಿಯಿಂದ ಪಂಡ್ಸ್ ಕೊಟ್ಟಿದೆ. ಹೇಗೋ ಅರ್ಜಿ ಹಾಕಿಕೊಳ್ಳುವ ಅವಕಾಶವನ್ನು ತೆಗೆದುಕೊಂಡು ಸಮಾಜದ ದಳ್ಳಾಳಿಗಳು ಹಣವನ್ನು ತಿಂದು ಹಾಕುತ್ತಿದ್ದಾರೆ, ಏತಕ್ಕೆ ಇಂಥ ಯೋಜನೆಗಳನ್ನು ತರುತ್ತೀರಿ ? ಏತಕ್ಕೆ ಹಣವನ್ನು ವಿಚ್ರ್ಯುಮಾಡುತ್ತೀರಿ. ಇದು ಸೆಬ್ಬುಲೈನವರು ಕೊಡಬೇಕಾದ ಹಣ, ಇದಕ್ಕೆ ನಿಮ್ಮದು ಏನು ಬೇಕಾಗುತ್ತದೆ ? ಇದಕ್ಕೆ ಬೇರೆ ಸೊಸೈಟಿ ಮಾಡಿ ಇಂಪ್ಲಿಮೆಂಟ್ ಮಾಡಬೇಕೆಂದು ಮೆಕಾವನ್ ಕಮಿಟಿಯವರು ಯೋಚಿಸಿದ್ದರು. ಆದು ಕಾರ್ಯಗತ